ಇಲ್ಲಿಂದ ಶಾಸಕರು ಹೋಗಿಬರುವುದಕ್ಕೆ ಕೂಡ ವಾಹನ ಸೌಕರ್ಯವನ್ನು ಏರ್ಪಾಡು ಮಾಡಲಾಗಿತ್ತು. ಆದರೆ ಅವರು ಯಾರೂ ಕೂಡ ಅಲ್ಲಿಗೆ ಬರತಕ್ಕ ಸಾಹಸದ ಕೆಲಸವನ್ನು ಮಾಡಲಿಲ್ಲ. ಕನ್ನಡ ಚಳುವಳಿಯ ಹೆಸರಿನಲ್ಲಿ ಅವರು ಕಲೆಕ್ಷನ್ ಚಳುವಳಿಯನ್ನು ಮಾಡುತ್ತಿದ್ದಾರೆ.....

ಅಧ್ಯಕ್ಷರು.—ತಾವು ದಯವಿಟ್ಟು ಕೂತುಕೊಳ್ಳಿ. ಕನ್ನಡ ಸಾಹಿತ್ಯ ಸಮ್ಮೇಳನದ ವಿಚಾರದಲ್ಲಿ ಪೂರ್ಣ ಪರಿಚಯ ಅಥವಾ ಪೂರ್ಣ ವಿವರಣೆಯನ್ನು ತಾವು ಕೊಡಬೇಕಾದ ಅಗತ್ಯವೇನೂ ಇಲ್ಲ. ನಮಗೂ ಸಾಕಷ್ಟು ವಿಚಾರ ಗೊತ್ತಿದೆ. ನೀವು ಸಾಕಷ್ಟು ಚೆನ್ನಾಗಿ ಅದನ್ನು ಮಾಡಿದ್ದೀರೆಂದು ನಮಗೆ ತಿಳಿದು ಬಂದಿದೆ. ಅದು ರೆಕಾರ್ಡ್‌ನಲ್ಲಿ ಹೋಗಿದೆ.

ಶ್ರೀ ಸಿ. ಬೈರೇಗೌಡ.—ಇವರಂ ಸಮ್ಮೇಳನಕ್ಕೆ ಬರದೇ ಏನಂ ಮಾಡುತ್ತಿದ್ದರು ? ಕನ್ನಡ ಕ್ಕೋಸ್ಕರ ನಾವು ನಮ್ಮ ಪ್ರಾಣವನ್ನು ಕೊಡುತ್ತೇವೆ, ನಮ್ಮ ರಕ್ತವನ್ನು ಕೊಡುತ್ತೇವೆಂದು ಹೇಳುತ್ತಿದ್ದ ಈ ಜನ ಅವತ್ತು ಎಲ್ಲಿ ಹೋಗಿದ್ದರು. ಕೋಲಾರ ಜಿಲ್ಲೆಯಲ್ಲಿ ೨ ಸಮ್ಮೇಳನವನ್ನು ಮಾಡಿದರು. ಆ ಸಂದರ್ಭದಲ್ಲಿ ಕನ್ನಡಕ್ಕಾಗಿ ಪ್ರಾಣವನ್ನು ಕೊಡತಕ್ಕ ಜನರು, ರಕ್ತವನ್ನು ಕೊಡತಕ್ಕ ಜನರು ಕನ್ನಡ ಕನ್ನಡ ಎಂದು ೩೬೫ ದಿವಸವೂ ಬೊಬ್ಬೆ ಹೊಡೆದುಕೊಳ್ಳುತ್ತಿದ್ದ ಈ ಜನ ಅವತ್ತು ಎಲ್ಲಿಗೆ ಹೋಗಿದ್ದರು ಎಂದು ನಾನು ಕೇಳಬೇಕಾಗಿದೆ, ಇವರು ಕನ್ನಡದ ಹೆಸರಿನಲ್ಲಿ ಕಲೆಕ್ಷನ್ ಚಳುವಳಿಯನ್ನು ಮಾಡತಕ್ಕ.....

MR. SPEAKER.—Don't record.

* * *

Statement by the Ministers

(1) Re : MATTER UNDER RULE 334

Relating to land Acquisition under Karanja Project

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ೩೩೪ನೇ ನಿಯಮದ ಕೆಳಗೆ ಎತ್ತಿದ ಪ್ರಶ್ನೆಗೆಉತ್ತರವಾಗಿ ನಾನು ಈ ಹೇಳಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಕಾರಂಜ ಯೋಜನೆಗಾಗಿ ಭೂಸ್ವಾಧೀನ ಮಾಡುತ್ತಿರುವ ವಿಷಯದಲ್ಲಿನ ಕುಂದು ಕೊರತೆಗಳು ಪ್ರಾಮುಖ್ಯವಾಗಿ

ಅ) ಕಡಿಮೆ ದರದಲ್ಲಿ ಕೊಡುತ್ತಿರುವ ಪರಿಹಾರ ಧನ

ಆ) ವಜಾ ಮಾಡಿರುವ ತಕಾವಿ ಮತ್ತು ಬೀಜಕ್ಕೆ ಕೊಟ್ಟ ಸಾಲವನ್ನು ಪರಿಹಾರ ಧನದಲ್ಲಿ ಕಡಿತ ಮಾಡುವುದು

ಇ) ಪರಿಹಾರ ಧನದಲ್ಲಿ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳ ಸಲುವಾಗಿ ಕಡಿತ ಮಾಡುವುದು ಇವೇ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಿವೆ.

೨) ಪರಿಹಾರ ಧನ ಕೊಡುವ ವಿಷಯದಲ್ಲಿ ಕುಂದಾಯ ಇಲಾಖೆಯು ಆಗಿಂದಾಗ್ಗೆ ಪರಿಶೀಲಿಸುತ್ತಿದೆ. ಹಾಲಿ ಆಕ್ಷೇಪಾಗಿರುವ ೧.೫೨ ಕೋಟಿ ರೂಪಾಯಿಗಳ ಪರಿಹಾರ ಧನದಲ್ಲಿ ಈಗಾಗಲೇ ೧.೪೭ ಕೋಟಿ ರೂಪಾಯಿಗಳನ್ನು ಹಂಚಲಾಗಿದೆ. ಕುಂದುಕೊರತೆಗಳನ್ನು ಬೀದರ್ ಜಿಲ್ಲೆಯ ಜಿಲ್ಲಾಧಿಕಾರಿಗಳ ಮೂಲಕ ವಿಚಾರಣೆ ಮಾಡಿ ವಿಶೇಷ ಭೂಸ್ವಾಧೀನಾಧಿಕಾರಿಗಳು ನಿಗದಿಪಡಿಸಿರುವ ನಿಯಮಗಳಂತೆ ಪರಿಹಾರ ಧನವನ್ನು ನಿರ್ಧರಿಸಲು ಆದೇಶ ಕೊಡಲಾಗುವುದು. ವಜಾ ಮಾಡಿರುವ ಸಾಲದ ಹಣವನ್ನು ಪರಿಹಾರ ಧನದಲ್ಲಿ ಕಡಿತ ಮಾಡಲಾರದಂತೆ ವ್ಯವಸ್ಥೆ ಮಾಡಲಾಗುವುದು.

(*ಮಾನ್ಯ ಅಧ್ಯಕ್ಷರ ಅಪ್ಪಣೆಯಂ ಮೇರೆಗೆ ದಾಖಲು ಮಾಡಿಕೊಳ್ಳಲಿಲ್ಲ).

೩) ಈ ಯೋಜನೆಯಿಂದ ತೊಂದರೆಗೀಡಾಗಿರುವ ಸಂಸಾರಗಳ ಪುನರ್ವಸತಿಗಾಗಿ ಸೂಕ್ತ ಜಮೀನನ್ನು ಆರಿಸಲು ಯೋಗ್ಯ ಕ್ರಮ ತೆಗೆದುಕೊಳ್ಳಲು ಲೋಕೋಪಯೋಗಿ ಇಲಾಖೆಯನ್ನು ಕೇಳಲಾಗುವುದು.

೪) ಈ ಯೋಜನೆಯು ಕಕ್ಷೆಯಲ್ಲಿ ಬರುವ ಹೆಚ್ಚುವರಿ ಜಮೀನನ್ನು ಹಂಚುವ ವಿಷಯದಲ್ಲಿ ಭೂಸುಧಾರಣೆ ಕಾಯಿದೆಯ ಸಕ್ಷನ್ ೬೫ (ಎ) ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು

(2) Paddy procurement in D.K. Dist.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಡಾ. ವಿ.ಎಸ್. ಆಚಾರ್ಯ ರವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ಯಾಡಿ ಪ್ರೊಕ್ಯೂರ್‌ಮೆಂಟ್ ಬಗ್ಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದರು. ಅದಕ್ಕೆ ಇವತ್ತು ಸಂಜೆಯೊಳಗೆ ನಾನು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದೆ. ಆದರೆ ಮಾನ್ಯ ಸದಸ್ಯರೇ ಇಲ್ಲಿ ಇಲ್ಲ. ಅವರು ಬಂದು ಕೇಳುವುದಾದರೆ ನಾನು ಉತ್ತರವನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇನೆಂದು ಹೇಳಬಯಸುತ್ತೇನೆ.

(3) Infermation to the local MLA about the visit of the Ministers

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಇವತ್ತು ಈ ಸದನವನ್ನು ನಾವು ವಂಂಗಿಸುತ್ತಿದ್ದೇವೆ. ಇದು ಮುಕ್ತಾಯವಾಗುವುದಕ್ಕೆ ವಂಂಚೆ ನಾನು ಒಂದೆರಡು ಮಾತನಾಡಬೇಕಾಗಿದೆ. ಅದು ಏನೆಂದರೆ ಇದುವರೆಗೂ ತಾವು ನಮಗೆಲ್ಲರಿಗೂ ನಮ್ಮ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡುವುದಕ್ಕೆ ಸಾಕಷ್ಟು ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ. ಆದ್ದರಿಂದ ನಮ್ಮ ಎಲ್ಲ ಮಾನ್ಯ ಸದಸ್ಯರ ಪರವಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುವುದರ ಜೊತೆಗೆ ತಾವು ಅಭಿನಂದಿಸುವುದಕ್ಕೆ ಮೊದಲು ನಾವು ನಿಮ್ಮನ್ನು ವಿಶೇಷವಾಗಿ ಅಭಿನಂದಿಸಬೇಕಾಗಿದೆ.

ಈಗ ಸದನ ಮುಗಿಯುತ್ತಿದೆ. ನಾವುಗಳು ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗುತ್ತಿದ್ದೇವೆ. ಅನೇಕ ಸಂದರ್ಭಗಳಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾಯಿತು. ಅದು ಏನೆಂದರೆ ಯಾವುದೇ ಮಂತ್ರಿಯಾಗಲಿ, ಮುಖ್ಯ ಮಂತ್ರಿಗಳಾಗಲಿ, ಯಾವುದೇ ಸಾರ್ವಜನಿಕ ಸಮಾರಂಭಗಳಿಗೆ ಹೋಗಬೇಕಾದರೆ ಅದು ವಿರೋಧಪಕ್ಷದವರ ಕ್ಷೇತ್ರವಾಗಲಿ, ಆಡಳಿತಪಕ್ಷದ ಕ್ಷೇತ್ರವಾಗಿರಲಿ ಪಕ್ಷಭೇದವಿಲ್ಲದೆ ಹೋಗಿ ಬರಬೇಕು ಎಂದು ಹೇಳಿದ್ದಾರೆ. ದೊಡ್ಡ ಹಳ್ಳಿ ಪ್ರಕರಣ ಕೂಡ ಇಲ್ಲಿ ಇದೆ. ಅವರು ವರದಿಯನ್ನು ಕೊಡುವಾಗ ಏನು ಹೇಳಿದ್ದಾರೆಂದರೆ ಸಾರ್ವಜನಿಕ ಅಧಿಕೃತ ಸಮಾರಂಭಗಳಲ್ಲಿ ಶಾಸಕರು ಭಾಗವಹಿಸಬೇಕಾದರೆ ಪ್ರೊಟೋಕಾಲ್ ನಾರಂಸ್‌ನ್ನು ಫಾಲೋ ಮಾಡಬೇಕೆಂದು ಸೂಚನೆಯನ್ನು ಕೊಟ್ಟಿದ್ದಾರೆ. ಆದರೂ ಕೂಡ ಅನಾವಶ್ಯಕವಾಗಿ ಆಗಿಂದಾಗ್ಗೆ ಇಂಥ ಸಮಸ್ಯೆಗಳನ್ನು ಉದ್ಭವ ಮಾಡುವುದು ಬೇಡ. ಸ್ವಾಮಿ, ನಾವು ಎಷ್ಟೇ ಹೇಳಿದರೂ ಕೂಡ ಮತ್ತೆ ಇವರು ಮಾಡಿದ ತಪ್ಪುಗಳನ್ನೇ ಮಾಡುತ್ತಾ ಹೋಗುತ್ತಿದ್ದಾರೆ. ನಾನಾದರೂ ಹೇಳುತ್ತೇನೆ ಇನ್ನು ಮುಂದೆ ಈ ರೀತಿ ತಪ್ಪುಗಳನ್ನು ಮಾಡುವುದಕ್ಕೆ ಹೋಗಬೇಡಿ. ತಾವು ಇದೇರೀತಿ ಮಾಡುತ್ತಾ ಹೋದರೆ ಮುಂದೆ ನಾವು ನಿಮ್ಮ ವಿರುದ್ಧ ಕಪ್ಪುಬಾವುಟವನ್ನು ಪ್ರದರ್ಶನ ಮಾಡುವಂತೆ ನಮ್ಮ ಪಕ್ಷದ ಜನರಿಗೆ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಈ ವಿಚಾರವನ್ನು ಬೀದಿಯಲ್ಲಿ ಪ್ರಚಾರ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಆ ರೀತಿ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಕೇವಲ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಈ ರೀತಿ ಮುಂದೆ ಮಾಡುವುದಕ್ಕೆ ಹೋಗಬೇಡಿ ಎಂದು ತಾವೂ ಹೇಳಿದ್ದೀರಿ, ಮಾನ್ಯ ಮಂತ್ರಿಗಳೂ ಹೇಳಿದ್ದಾರೆ, ನಾವೂ ಕೂಡ ಅನೇಕಸಾರಿ ಈ ಸದನದಲ್ಲಿ ಹೇಳಿ ಹೇಳಿ ಸಾಕಾಯಿತು. ಆದರೂ ಕೂಡ ಇವರು ಅದನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಇದು ಸರಿಯಲ್ಲ, ಇನ್ನು ಮುಂದಾದರೂ ಪ್ರೀತಿ, ಸೌಹಾರ್ದತೆಗೆ ಅವಕಾಶವನ್ನು ಕಲ್ಪಿಸಿಕೊಳ್ಳುವ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ತಾವು ಹೇಳಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀಕಂಠಯ್ಯನವರೂ ಅದನ್ನೇ ಹೇಳುತ್ತಿದ್ದಾರೆ.